**AKSHARASURYA**
Peer-Reviewed, Multi Lingual E-Journal
Volume – 02, Issue – 01, January 2023.

# ತಲೆಮಾರಿನಿಂದತಲೆಮಾರಿಗೆ ಸಾಗಿದ'ತೇರು'

**ಮಲ್ಲೇಶ ಸಿ.**
**ಸಂಶೋಧನಾ ವಿದ್ಯಾರ್ಥಿ**
**ಮಹಾರಾಜ ಕಾಲೇಜು, ಮೈಸೂರು.**
**9743265089**
**malleshkanda@gmail.com**

ಸಂಸ್ಕೃತಿಎಂದರೆಒಂದುಜೀವಂತ ಸಂಗತಿ. ಜೀವಂತವಾದುದಕ್ಕೆ ಹುಟ್ಟು–ಬೆಳವಣಿಗೆ–ವಿನಾಶ ಎಲ್ಲವೂಇರುತ್ತದೆ. ತಮ್ಮ ಪೂರ್ವದ ಸಾಂಸ್ಕೃತಿಕ ಸ್ಮೃತಿಗಳಿಗೆ ಇಂತಹ ಸ್ಥಿತ್ಯಂತರ–ಪಲ್ಲಟ–ವಿನಾಶಗಳನ್ನು ಗಮನಿಸಿಯೂ, ಅವುಗಳನ್ನು 'ನಿತ್ಯ' ಎಂಬ ನಂಬುಗೆಯನ್ನು ಹೆಣೆಯುತ್ತಾ ಹೋಗುವ ಸಮಾಜಆಯಾಯಕಾಲದಲ್ಲಿ ಹೊಸ ಹೊಸದನ್ನುಕಟ್ಟುತ್ತಾ ಹಳೆಯದರ ನಾಶವನ್ನು ಆತಂಕ–ಆಘಾತಗಳಲ್ಲಿ ಎದುರುಗೊಂಡು ಚಲಿಸುತ್ತಾ ಹೋಗುತ್ತದೆ. ಇಂತಹಒಂದು ದೇಸಗತಿಹಾಗೂ ಆ ದೇಸಗತಿಯನ್ನು ನಿರ್ಧರಿಸುವಸಂಕಥನಗಳ ಸರಣಿಯೊಂದನ್ನುತೆರೆದಿಡುವ ಮಹತ್ವದಕೃತಿಎಂದರೆರಾಘವೇಂದ್ರ ಪಾಟೀಲರ**"ತೇರು"**ಕಾದಂಬರಿ.

ಕೇಂದ್ರ ಸಾಹಿತ್ಯಅಕಾಡೆಮಿ ಪ್ರಶಸ್ತಿ ವಿಜೇತಕೃತಿಅನ್ನುವಗರಿಯನ್ನು ಮುಕುಟದೊಳಗೆ ಧರಿಸಿಕೊಂಡಿರುವ ತೇರು, ಕಾದಂಬರಿಅನ್ನುವುದಕ್ಕಿಂತಲೂ ನೀಳ್ಗತೆ ಅನ್ನಬಹುದಾದ್ದು, ಡಾ. ಸಿ.ಎನ್. ರಾಮಚಂದ್ರನ್ನರ ಮುನ್ನುಡಿ, ಡಾ.ಪುರುಷೋತ್ತಮ ಬಿಳಿಮಲೆಯರ ಮೆಚ್ಚುನುಡಿ, ಡಾ.ಹೆಚ್.ಎಸ್.ವೆಂಕಟೇಶಮೂರ್ತಿಯವರ ಬೆನ್ನುಡಿಯನ್ನು ಹೊಂದಿರುವ ಈ ತೇರುಇತಿಹಾಸ ಮತ್ತು ಪುರಾಣದ ನಡುವಿನ ತೆಳುಗೆರೆಯ ಮೇಲೆ ಮೂಡುವಜಾನಪದಕತೆಯಂತೆ ಭಾಷೆ, ಭಾವ, ಶೈಲಿ, ಸೊಗಡುಗಳಲ್ಲಿ ಆವರಿಸಿಕೊಂಡು ಓದಿಸಿಕೊಳ್ಳುವ 'ತೇರು'ಒಂದುಉತ್ತಮಕಥಾನಕ.

ರಾಘವೇಂದ್ರ ಪಾಟೀಲರುಕಥೆಗಾರ, ಕಾದಂಬರಿಕಾರ, ವಿಮರ್ಶಕ, ಮತ್ತು ಸಂಪಾದಕರಾಗಿಯೂಒಟ್ಟು ಹದಿನಾರು ಕೃತಿಗಳನ್ನು ಹೊರತಂದಿರುವ ಪಾಟೀಲರು ಹಲವು ವರ್ಷಗಳಿಂದ 'ಸಾಹಿತ್ಯ ಸಂವಾದ' ಎಂಬ ನಿಯತಕಾಲಿಕದ ಸಂಪಾದಕರೂ ಹೌದು, ತೇರುಕೃತಿಯ ಮುನ್ನುಡಿಯಲ್ಲಿಡಾ. ಸಿ.ಎನ್. ರಾಮಚಂದ್ರನ್‌ರವರು'ಪಾಟೀಲ'ರುಕನ್ನಡಕಥೆಗಾರರಲ್ಲಿ ಪ್ರವೇಶಕರುಎನ್ನುತ್ತಾರೆ. ಇದನ್ನು ಕೇವಲ ಕಾಲ ಸೂಚಕವಾಗಿ ಉಪಯೋಗಿಸಿಲ್ಲವೆಂದು ವಿವರಿಸುತ್ತಾ.ಕನ್ನಡ ಸಣ್ಣಕಥೆ ಎಂಬ ಪ್ರಭೇದ ನವ್ಯಕಾವ್ಯಕ್ಕೆ ಸರಿಸಾಟಿಯಾಗಿಅಂದರೆ ನವ್ಯ ಸಾಹಿತ್ಯದಲ್ಲಿ ಪ್ರತಿಯೊಂದು ಪ್ರಭೇದವೂಕಾವ್ಯದ ಮತ್ತೊಂದುರೂಪವೇಆಗಿತ್ತುಅಥವಾಆಗಿರಬೇಕುಎಂಬುದು ನವ್ಯ ಲೇಖಕರ ನಿಲುವಾಗಿತ್ತುಎಂಬುದುಇಂದುಎಲ್ಲರಿಗುಗೊತ್ತಿರುವ ವಿಷಯ. ಈ ನಿಲುವಿಗೆ ವಿರುದ್ಧವಾಗಿ, ನವ್ಯೋತ್ತರಕಥನ ಸಾಹಿತ್ಯ ಮತ್ತೊಂದು ದಿಕ್ಕನಲ್ಲಿ ಸಮಷ್ಠಿ ಚಿಂತನೆ, ಅಂತಃಶಿಸ್ತಿನ ಸಾಮಾಜಿಕಗ್ರಹಿಕೆ, ಭ್ರಮೆ–ವಾಸ್ತವಗಳ ಮಿಶ್ರಣ ಇತ್ಯಾದಿಗಳ ದಿಕ್ಕಿನಲ್ಲಿಕಥನ ಸಾಹಿತ್ಯ ಸಾಧ್ಯತೆಗಳನ್ನು ಅಳವಾಗಿ ಶೋಧಿಸಲುತೊಡಗಿತು ಈ ಹಿನ್ನೆಲೆಯಲ್ಲಿರಾಘವೇಂದ್ರ ಪಾಟೀಲರತೇರು ಹೆಚ್ಚು ಅರ್ಥಪೂರ್ಣವಾಗಿಕಾಣುತ್ತದೆಎಂದಿದ್ದಾರೆ.

ತೇರುಎನ್ನುವ ಶೀರ್ಷಿಕೆಯ ಜೊತೆಗೆಆಧುನಿಕ ಪುರಾಣ ಎಂಬ ಉಪಶೀರ್ಷಿಕೆಯನ್ನು ಗಿಟ್ಟಿಸಿಕೊಂಡ ಈ ಕಥೆಗೆ ಪುರಾಣದಂಥಕಥಾವಲಯವಿದೆ. ಧರಮನಟ್ಟಿಎನ್ನುವ ಪುಟ್ಟಊರಿನ ಸುತ್ತ ಹಬ್ಬಿಕೊಳ್ಳುವ ಈ ಕಥೆಗೆ ನೂರೈವತ್ತು ವರುಷಗಳ ಕಾಲದ ಹರವೂಇದೆ. ಒಂದುದೇಸಗತಿಯ ಸಣ್ಣ ಸಾಮ್ರಾಜ್ಯವೊಂದರ ವೈಭವೋಪೇತಆರಂಭದ ಸಂಧರ್ಭ ಹಾಗೂ ಪ್ರಸ್ತುವಗದ್ದಲದರಾಜಕಾರಣದ ವಾತಾವರಣ ಈ ಕಿರುಕಾದಂಬರಿಯ ಮುಖಾಮುಖಿಯಾಗುತ್ತವೆ.ಈ ಕಾದಂಬರಿಯ ನಿರೂಪಣೆಯಲ್ಲಿ ಮೂರು ಪ್ರಮುಖ ನಿರೂಪಕರನ್ನೂಗೊಂದಲಿಗರಗಾಯನವನ್ನೂತೇರೆನ್ನುವ ಪ್ರತಿಮೆಯನ್ನೂ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಜಾನಪದಕಥಾನಕದಂತಹತೇರಿನ ಹಿನ್ನೆಲೆಯಕಥಾನಕದಂತಹತೇರಿನ ಹಿನ್ನೆಲೆಯಕಥಾಭಾಗಕ್ಕೆಗೊಂದಲಿಗರಗಾಯನದಂತಹ ನಿರೂಪಣಾತಂತ್ರವನ್ನು ಹಿಡಿದಿದ್ದಾರೆ. ಅದರಲ್ಲಿನಜಾನಪದ ಸೊಗಡುತೇರಿನ ಹಿನ್ನೆಲೆಗೆಗಟ್ಟಿತನ ಒದಗಿಸಿಕೊಡುತ್ತದೆ. ಕಥಾನಕದಉದ್ದಕ್ಕೂ ಬಳಸಲಾಗಿರುವ ಗ್ರಾಮ್ಯ ಭಾಷೆ, ಅಭ್ಯಾಸವಿಲ್ಲದವರಿಗೆ ಮೊದಲ ಓದಿನಲ್ಲಿತೊದಲುವಂತೆ ಅನಿಸಿದರೂ ಕಥೆಯ ವಾತಾವರಣದಿಂದಾಗಿಅದು ನಮ್ಮನ್ನು ಆವರಿಸಿಕೊಳ್ಳುವಲ್ಲಿ ಸಹಕಾರಿಯಾಗುತ್ತದೆ.

ಊಳಿಗಮಾನ್ಯ ವ್ಯವಸ್ಥೆಯೊಂದರ ಸೆರಗಿನಲ್ಲಿ ಹುಟ್ಟಿಕೊಳ್ಳುವ ರಂಗೋಪಟವರ್ಧನನ'ದೇಸಗತಿ'ಯಂತಹಅಧಿಕಾರ ಶಕ್ತಿ ತನ್ನ ಅಸ್ತಿತ್ವದ ಸಂಕೇತಾಗಿ ಮನೆದೇವರಾದ ವಿಠ್ಠಲನಿಗೆ ಕಟ್ಟಿಸುವ ಭವ್ಯವಾದದೇವಾಲಯ ಮತ್ತುಅದರ'ಬೃಹತ್‌ತೇರಿ'ನ ಚಲನೆ ಹಾಗೂ 'ರಕ್ತತಿಲಕದ ಸೇವೆ'ಯಆರಂಭ ಮತ್ತು ನಿಲುಗಡೆ ನಡುವೆಚಾಚಿಕೊಂಡಿರುವಕೃತಿತನ್ನ ವಸ್ತುವಾಗಿ ತಲೆಮಾರುಗಳ ಕಥನವನ್ನು ಹೊಂದಿದೆ. ಈ ತಲೆಮಾರಿನ ಕಥೆಯೊಳಗೆ ವೆಂಕೋಬರಾವ್‌ರಂಗೋಪಟವರ್ಧನದೇಸಾಯಿ ಆಗುವ ಪ್ರಕ್ರಿಯೆ; ಈ ಪ್ರಕ್ರಿಯೆಯನ್ನು ಸಾಧ್ಯವಾಗಿಸುವಧಾರ್ಮಿಕ ಸಂಕಥನ ಹುಟ್ಟು ಹಾಕುವ ಮತ್ತು ವೈಭವೀಕರಿಸುವ ಹಿಂಸೆ, ಮಗನನ್ನು ಬಲಿಕೊಟ್ಟು ಪುರಾಣ ಪುರುಷನಾಗುವಗೊಂಬೀರಾಮನ ವಂಶದದ್ಯಾವಪ್ಪ ಮತ್ತವನರಕ್ತತಿಲಕದ ಸೇವೆ, ಧರುಮನ ಹಟ್ಟಿಯತೇರು, ಅದರೊಳಗಿನ ಪುರಾಣ–ಇತಿಹಾಸ–ವರ್ತಮಾನಗಳ ಸರಣಿಯೇಕಾದಂಬರಿಯ ಮೊದಲ ಭಾಗದ ಹೂರಣ. ಆಧುನಿಕದ್ಯಾವಪ್ಪನ ನವನಿರ್ಮಾಣ ಚಳವಳಿ, ದೇವರು ವಿರುದ್ಧದ ಬಂಡಾಯ, ಬಾಳವ್ವಳಿಗೆ ಬಾಳು ನೀಡುವದ್ಯಾವಪ್ಪನಿಂದ ಬಾಬಾ ಆಮ್ಟೆಯವರ ಸೇವಾಶ್ರಮ ಪ್ರವೇಶ, ಧರಮನಟ್ಟಿತೇರು ಹಬ್ಬದ ನಿಲುಗಡೆ, ದೇಗುಲದಲ್ಲಿನ ಕಳವು, ನಿರ್ವಾಣಗೊಳ್ಳುವ ವಿಠ್ಠಲ–ರುಕುಮಾಯಿಯರು, ಮೊಳಕೆಯೊಡೆಯುವ ಮತೀಯತೆ/ಜಾತೀಯತೆ/ಕೋಮುವಾದಿ ಆಲೋಚನೆ, ಮತಾತೀತನಾದಜೈನಮತೀಯ ಸ್ವಾಂವಜ್ಜನ ಸಲ್ಲೇಖನರೂಪದಆತ್ಮಹತ್ಯೆ, ದೊಂಬರ ಬಾಳವ್ವ–ದ್ಯಾವಪ್ಪರ ವಿನೂತನ ದಾಂಪತ್ಯಗಳ ಕಥಾ ಸರಣಿಗಳು ಅದರಎರಡನೇ ಭಾಗದಲ್ಲಿವೆ. ಅದಲ್ಲದೆಕಾದಂಬರಿ ಸಂಕಥನಳಿಂದ ಬಿಡುಗಡೆ ಪಡೆಯುವ ಸಾಧ್ಯತೆಗಳಾಗಿ ಮೂಲ ದ್ಯಾವಪ್ಪನ ಸಂತ'ತನ ಮತ್ತುಆಧುನಿಕದ್ಯಾವಪ್ಪ ಸಾಮಾಜಿಕ ಕಾಳಜಿಯ ತ್ಯಾಗಗಳನ್ನು ತೋರುತ್ತದೆ. ಈ ಎರಡು ಸಾಧ್ಯತೆಗಳು ಸಾಧ್ಯವಿಲ್ಲದಅಸಂಖ್ಯಾತ ಸಾಮಾನ್ಯಜನಅಧಿಕಾರಕೇಂದ್ರಿತ ಸಂಕಥನಗಳಿಗೆ ಅಡಿಯಾಳಾಗಿ, ಉಳ್ಳವರು ಕಟ್ಟಿದತೇರನ್ನು ಎಳೆಯುತ್ತಾ, ಅದರ ಚಕ್ರಗಳಿಗೆ ಬಲಿಯಾಗುತ್ತಾ, ಬಲಿಗಾಗಿ ತಮ್ಮನ್ನುತಾವು ಶುದ್ಧಗೊಳಿಸಿಕೊಳ್ಳುತ್ತಾ ಬದುಕಿಕೊಂಡು ಹೋಗುವ ವಾಸ್ತವವನ್ನುಕಾದಂಬರಿಅನಾವರಣ ಮಾಡುತ್ತದೆ.

ಕಾದಂಬರಿಯ ಮುನ್ನುಡಿಯಲ್ಲಿ ಪ್ರೊ.ಸಿ.ಎನ್. ರಾಮಚಂದ್ರನ್ ಗುರುತಿಸಿದಂತೆ,"ಊಳಿಗಮಾನ್ಯ ವ್ಯವಸ್ಥೆಯಾಗಲೀ, ಆಧುನಿಕ ಪ್ರಜಾತಂತ್ರ ವ್ಯವಸ್ಥೆಯಾಗಲೀ, ಒಂದು ವ್ಯವಸ್ಥೆಗೆಅಧಿಕಾರಕೊಡುವ ಮತ್ತುಅದನ್ನು ಮಾನ್ಯ ಮಾಡುವ ಪ್ರಭಾವಿ ಸಂಕಥನಗಳಲ್ಲಿ ಅತಿ ಪ್ರಬಲ ಹಾಗೂ ಪ್ರಭಾವಿಯಾದುದುಧಾರ್ಮಿಕ ಸಂಕಥನ... ಹೀಗೆ ಪ್ರಭುತ್ವವನ್ನು ಅಸ್ತಿತ್ವಕ್ಕೆ ತರುವ, ಅದನ್ನು ಬಲಪಡಿಸುವ ಹಾಗೂ ಅದಕ್ಕೆ ಮಾನ್ಯತೆ ದೊರಕಿಸಿಕೊಡುವ ಒಂದುಕಾಲದ ಪ್ರಭಾವಿ ಧಾರ್ಮಿಕ ಸಂಕಥನದ ಸ್ವರೂಪವೇನು? ಅದರ ರೂಪಗೊಳ್ಳುವ ಪ್ರಕ್ರಿಯೆಎಂತಹದು?... ಈ ಪ್ರಶ್ನೆಗಳು ತೇರುಕೃತಿಯಕೇಂದ್ರದಲ್ಲಿವೆ." ಅಧಿಕಾರ ಶಕ್ತಿಯಿಂದ ಸೃಜಿಸಲ್ಪಟ್ಟಧಾರ್ಮಿಕ, ರಾಜಕೀಯ, ಸಾಮಾಜಿಕ ಸಂಕಥನಗಳು ದೀನ–ದುರ್ಬಲವರ್ಗಗಳ ಸ್ವಯಂ ಪ್ರೇರಿತಒಪ್ಪಿಗೆಯನ್ನು ದಕ್ಕಿಸಿಕೊಳ್ಳುವ ಪ್ರಭುತ್ವಶಕ್ತಿಯ ಉಳಿವಿಗಾಗಿ ದಮನಿತರ ಮೇಲಿನ ಹಿಂಸೆ ಮತ್ತು ಶೋಷಣೆಯನು ವೈಭವೀಕರಿಸುವಜೊತೆಗೆ ಅನಿವಾರ್ಯವಾಗಿಸುತ್ತದೆ. ಈ ಸಂಕಥನಗಳು ಆಜ್ಞೆಯರೂಪ್ ಶಾಸನಗಳಲ್ಲೋ, ಕವಿ ಪಂಡಿತರಕಾವ್ಯದ ಮೂಲಕವೋ, ಒಪ್ಪಿಕೊಂಡಜನರು ಕಟ್ಟಿಕೊಳ್ಳುವ ಪುರಾಣಗಳ ರೂಪದಲ್ಲೋ ಹಿಂಸೆ ಮತ್ತು ಹಿಂಸೆಗೆ ಕಾರಣವಾದ ಆಳುವ ವರ್ಗದ ಅಸ್ತಿತ್ವಕ್ಕೆ ನಿರಂತರತೆಯನ್ನು ದಕ್ಕಿಸಿಕೊಡುತ್ತವೆ. ಪ್ರಸ್ತುತಕಾದಂಬರಿಯಲ್ಲಿ ಹಿಂಸೆಯ ವಿಜೃಂಭಣೆಯಂತೆ, ದೇಸಗತಿಯ ವೈಭವದ ನಿರೂಪಣೆಯಂತೆಕಂಡುಬರುವಗೊಂದಲಿಗರ ವೃತ್ತಿಗಾಯನದಕಥಾನಿರೂಪಣೆಯಲ್ಲಿ ಬರುವ ಸಾಲುಗಳು ಈ ದೃಷ್ಟಿಯಿಂದಗಮನಾರ್ಹ. ಇವು ಆಳುವ ವರ್ಗದ ವಿಕೃತಿ, ವಂಚನೆಯನ್ನೂ, ಧಮನಿತರ ಶ್ರದ್ಧೆ ಮತ್ತುಅಸಹಾಯಕತೆಯಜೊತೆಗೆಅಧಿಕಾರ ಶಕ್ತಿಯಿಂದ ಪರಿಕಲ್ಪಿತವಾದ ಸಂರಚನೆಗಳು ಬೇಡುವ'ಬಲಿ' ಮತ್ತು ಬಲಿಯ ಪರಿಕರ ಮೂಲವನ್ನುತೆರೆದುತೋರುತ್ತವೆ.

ಹಾಗೇಯೇದೇಸಗತಿಯುಗೊಂಬಿರಾಮನ ವಂಶದದ್ಯಾವಪ್ಪನಿಗೆ ಬರೆದುಕೊಟ್ಟ ಸನದಿನಲ್ಲಿಯ ಉಲ್ಲೇಖಗಳೂ ಈ ಹಿಂಸೆಯ ವೈಭವೀಕರಣದೊಂದಿಗೆಅದರ ನಿರಂತರ ಅನಿವಾರ್ಯತೆಯಆಶಯವನ್ನುಧ್ವನಿಸುತ್ತದೆ.

ನರಬಲಿಯ ವಿಚಾರ ಬಂದಾಗದೊರೆ, ಕಾರಭಾರಿ, ದಂಣಾಯಕರುಗಳು ತಮ್ಮೊಂದಿಗೆಉತ್ತಮಕುಲದವರನ್ನೂ ಹೊರಗಿಟ್ಟುಕಾಟುಕಕುಲದ ವ್ಯಕ್ತಿಯನ್ನೇ'ತೇರು' ಬಲಿಯಾಗಿಆಯ್ದುಕೊಂಡಿದೆಎಂಬಂತೆ ಶಾಸ್ತ್ರ ಹೇಳಿಸುತ್ತಾರೆ. ಊರಿನಕಾಟುಕರೆಲ್ಲರೂ ಬಲಿಯ ಸಂಗತಿ ತಿಳಿದು ಪಲಾಯನರೂಪದ ಪ್ರತಿಭಟನೆತೋರಿದಾಗ, ಬಡತನವನ್ನೇ ಗಳಿಸಿದ ಆಸ್ತಿಯಂತೆ ಕಾಪಿಡಿಕೊಂಡು ಬಂದಜಗತ್ತಿನಕಾಟುಗರ ನೂರೆಂಟು ಕುಲಗಳ ನಡುವಿನಿಂದ ಹೇಗಾದರೂಒಂದು ಬಲಿಯನ್ನು ಆರಿಸಿಯೇ ತೀರಬಹುದು ಎಂಬ ವಿಶ್ವಾಸದಲ್ಲಿತಮ್ಮನ್ನು ಸಾವಿನಿಂದ ಪಾರು ಮಾಡಿಕೊಳ್ಳುವ ತಂತ್ರಗಾರಿಕೆಯನ್ನು ಹೆಣೆಯುವ ಕಾರಭಾರಿ–ದಂಣಾಯಕರುಗಳು ಕೊನೆಗೂ ಯಶಸ್ವಿಯಾಗುತ್ತಾರೆ. ದಂಣಾಯಕನ ಹೆಂಡತಿ ಪಾರವ್ವ ಹೆತ್ತ ಕರುಳಿನ ನೋವು

ಮರೆತವಳಂತೆ ದ್ಯಾವಪ್ಪ ಮತ್ತು ಲಕುಮವ್ವರ ಬಡತನವನ್ನು ಗುರುತಿಸಿ ಅನ್ನಚೆಲ್ಲಿಜೀವ ತೆಗೆಯುತ್ತಾಳೆ. ಪಾರವ್ವಎಂಟೆಕೆರೆ ಭೂಮಿಯ ಆಸೆ ತೋರಿಸಿ, ಹೆತ್ತತಾಯಿಯ ನಿರಾಕರಣೆಯ ನಡುವೆಯೂಗೊಂಬೀರಾಮನಿಂದ'ಕೊಡುತ್ತೇನೆ ಬಿಡುತಾಯೆಐದಾನೆ ಮಗನ, ಸ್ವಾಮಿಕೊಟ್ಟದ್ದು ಸ್ವಾಮೀಗೇಅರುಪಣಾ' ಎಂಬ ನಂಬುಗೆಯನ್ನು ಪಡೆದುಕೊಳ್ಳುತ್ತಾಳೆ. ಮತ್ತುಅವರುಓಡಿಹೋಗಿ ಬದುಕಿಕೊಳ್ಳದಂತೆ ನಿಗವಹಿಸುವಲ್ಲಿತನ್ನಚತುರತೆಯನ್ನು ತೋರಿಸಿ ಬಲಿಯಏರ್ಪಾಡಿಗೆ ಸಹಕರಿಸುತ್ತಾಳೆ. ಇಲ್ಲಿದ್ಯಾವಪ್ಪನಓಡಿಹೋಗುವಯೋಚನೆ ಹಾಗೂ ಮಗನನ್ನು ಉಳಿಸಿಕೊಳ್ಳುವ ಲಕುಮವ್ವಳ ಪ್ರಯತ್ನವೆಲ್ಲಾ ವ್ಯರ್ಥವಾಗುತ್ತದೆ. ಹುಡುಗಚಂದ್ರನನ್ನುತೇರಿನ ಗಾಲಿಗೆ ಇರಿಸಿ ಬಲಿಕೊಡಲಾಗುತ್ತದೆ. ಹೀಗೆ ಕಾಟುಕರಕುಲದಕಂದನ ನರಬಲಿ ಹೆತ್ತತಾಯಿಯ ಹುಟ್ಟೆಗೆ ಬೆಂಕಿ ಹಚ್ಚಿ, ಹುಚ್ಚಿಯಾಗಿಸಿದರೂ, ದ್ಯಾವಪ್ಪನಿಗೆ'ತೊಗಲಿ ಅಂಟಿದಅನುಭವಕ್ಕೆ ಬಣ್ಣಾತುಂಬಿ ಹೇಳೋ' ಪ್ರೇರಣೆಯಾಗುತ್ತದೆ. ಗೊಂಬಿರಾಮನದ್ಯಾವಪ್ಪ ನಅಸಹಾಯಕತೆಜನರ ಬಾಯಿಯಲ್ಲಿ'ಸ್ವಾಮಿಯರಥಕ್ಕ ಮಗನ್ನ ಬಲಿಕೊಟ್ಟು ನೂರುಜನುಮಕ್ಕ ಸಾಕಾಗುವಷ್ಟು ಪುಣ್ಯ ಪಡಕೊಂಡ' ಸಂತನತ್ಯಾಗವಾಗಿಕೀರ್ತಿಸಲ್ಪಟ್ಟು, ಉಳ್ಳವರ ಗೌರವದೊಂದಿಗೆಕಾಟುಕರುಕಾಲ್ಗೆರಗಿ ನೀಡುವ ನಮಸ್ಕಾರಗಳನ್ನೂ ಗಳಿಸಿಕೊಂಡು ತಾನನುಭವಿಸಿದ ಜೀವವಿರೋಧಿ ಹಿಂಸೆಯನ್ನುತಾನೇ ವೈಭವೀಕರಿಕೊಳ್ಳುವಂತಾಗುತ್ತದೆ. ಈ ವೈಭವೀಕರಣಕ್ಕೆತೊಡಗುವುದಲ್ಲದೆ ಮಗನ ಜೀವ ನುಂಗಿದತೇರಿಗೆ ವರ್ಷಂಪ್ರತಿರಕ್ತತಿಲಕ ಸೇವೆ ಮಾಡೋ ಪರಂರೆ ಆರಂಭಿಸಿ ತೇರಿನ ಹಬ್ಬಕ್ಕೆಂದು ಮಡಿಜೊತೆಗೆರಕ್ತ ಶುದ್ಧಿಗೆ ತೊಡಗುವುದುಕಾದಂಬರಿಯಲ್ಲಿನ ಬಹುದೊಡ್ಡ ವ್ಯಂಗ್ಯಎನ್ನುವಂತಿದೆ. ಶುದ್ಧಿ ಪ್ರಕ್ರಿಯೆಯಲ್ಲಿ ಬಲಸುವುದು ಲಂಪಟರಾಮಣ್ಣನಿಗೆ ಶಂಕ್ರಜ್ಜನಅಜ್ಜಕೊಟ್ಟರಕ್ತ ಶುದ್ಧಿಯಔಷಧಿಯನ್ನೇರಕ್ತತಿಲಕದ ಸಂತದ್ಯಾವಪ್ಪನೂಅನುಸರಿಸುತ್ತಾನೆ. ಪ್ರಾಯಶಃಕಾದಂಬರಿ ಸಮಾಜದ ಆಳುವ ವರ್ಗದ ಹಾದರಕ್ಕೆ ಈ ಶುದ್ಧೀಕರಣದ ಮೂಲಕ ಸಾಂಕೇತಿಕ ಪ್ರತಿಕ್ರಿಯೆಯನ್ನುತೋರುತ್ತಿರಬೇಕು. ಎಂದ್ದಿದ್ದಾರೆ. ಜೊತೆಗೆ'ಮನಸ ಕಟ್ಟಿದತೇರಿಗೆ ಮನಸಾನೆ ಬಲಿಯೊ'ಎನ್ನುವಧ್ವನಿಪೂರ್ಣವಾದಗೊಂದಲಿಗರಗಾಯನದಸಾಲುಗಳನ್ನು ಕಾದಂಬರಿಗೆ ಅನ್ವಯಿಸಿ ನೋಡಿದಾಗ ಬಲಿಯ ಸರಣಿಗಳು ಒಂದೊಂದಾಗಿ ತೆರೆದುಕೊಳ್ಳುವುದನ್ನು ಕಾಣಬಹುದಾಗಿದೆ.

ಸಾಮಾಜಿಕ ಬದುಕಿನಲ್ಲಿ ಉಳ್ಳವರು ಮತ್ತುಅಧಿಕಾರಸ್ಥರ, ಉಳ್ಳವರ ತಂತ್ರಗಾರಿಕೆ ಮೂಲಕವಾಗಿ ರೂಪಗೊಳ್ಳುವ ಸಂಕಥನಗಳಲ್ಲೆ ಸಿಕ್ಕು ನರಳುವ ಮುಖ್ಯವಾದ ವರ್ಗವೆಂದರೆದಲಿತರು, ಕೆಳಜಾತಿಯವರು ಮತ್ತುಅದರಲ್ಲಿಯೂ ಮುಖ್ಯವಾಗಿ ಸ್ತ್ರೀಯರು ಎನ್ನಬಹುದು.

ಸಮುದಾಯಿಕ ಪ್ರಜ್ಞೆಯಲ್ಲಿಜಾಗಪಡೆದುಕೊಂಡು ನಿರಂತರ ಚಲನೆಯ ಭ್ರಮೆ ಮತ್ತು ವಾಸ್ತವವನ್ನು ಆಗುಗೊಳಿಸುವ ಸಲುವಾಗಿ ರಚಿತವಾದತೇರು ಹೇಗೆ ವಿಭಿನ್ನ ಮಜಲುಗಳುಳ್ಳ ರಚನೆಯೋ ಹಾಗೆಯೆ ಸಮಾಜಅಥವಾ ವ್ಯವಸ್ಥೆಎನ್ನೋತೇರುಕೂಡಾಒಂದುರಚನೆ. ಬಹುಸ್ತರಗಳನ್ನು ಹೊಂದಿ ಒಂದು ಪೂರ್ಣಾಂಗರಚನೆಯನ್ನು ಹೊಂದಿದತೇರುತನ್ನ ನಿರಂತರ ಚಲನೆಯಲ್ಲಿ ಹೇಗೆ ತಳಸಮುದಾಯದ ಅಥವಾದುರ್ಬಲರ ನೆತ್ತರನ್ನು ಬೇಡುತ್ತಾ ಮುಂದುವರೆದುಕೊಂಡು ಬಂದಿದೆಯೋ ಹಾಗೆಯೇಅಸಮಾನ ಸಂಬಂಧಗಳನ್ನು ಹೊಂದಿ ರಚಿತವಾಗಿರುವ ನಮ್ಮ ಸಾಮಾಜಿಕತೇರು ಅನೇಕ ಪರಿಕಲ್ಪಿತ ಸಂಗತಿ, ಸಂಸ್ಥೆ, ತಾತ್ವಿಕತೆಗಳ ಸಮ್ಮಿಲಿತರೂಪವಾಗಿದ್ದು ಆಳುವವರ ಕನಸನ್ನು ಪೋಷಿಸಿ ಸಮುದಾಯದ ಸಾಮಾನ್ಯ ಪ್ರಜ್ಞೆ ಮತ್ತು ಅಸ್ತಿತ್ವದ ಬಲಿ ಬೇಡುತ್ತಾಅದನ್ನು ನಿಯಂತ್ರಿಸಿಕೊಂಡು ಬಂದಿದೆ. ಇಂತಹ ಸಾಮಾಜಿಕ ಸಂರಚನೆಯೊಳಗೆ ಇಂದಿಗೂ ಇಂತಹ ಆಚರಣೆಗಳು ನೆಲೆಯುರಿರುವುದು ವಿಪರ್ಯಸದ ಸಂಗತಿಎನ್ನಬಹುದು.

ಪ್ರಭುತ್ವಕೇಂದ್ರೀತ ವ್ಯವಸ್ಥೆ ಹುಟ್ಟುಹಾಕುವ ಸಂಕಥನಗಳ ವಿವರಗಳು ಕಾಲಕಾಲಕ್ಕೆ ಬೇರೆಯಾಗಿಯೂ ಅವುಗಳ ಆಶಯ ಮಾತ್ರಒಂದೇಆಗಿರುವುದನ್ನುಕಾದಂಬರಿಅದ್ಭುತವಾಗಿಧ್ವನಿಸುತ್ತದೆ. ದೇಸಗತಿಯ ಕಾಲಕ್ಕೆತೇರಿನ ಸಂಕಥನವಾದರೆ, ಆಧುನಿಕ ಕಾಲಕ್ಕೆ ನವನಿರ್ಮಾಣ ಚಳವಳಿಯ ಸಂಕಥನ ಹುಟ್ಟುವಂತೆಯೇ ಮುಂದೆ ಬೇರೊಂದು ಆ ಜಾಗದಲ್ಲಿ ಆಕ್ರಮಿಸಿಕೊಳ್ಳಬಹುದು. ಪ್ರತೀ ಕಾಲಘಟ್ಟಗಳಲ್ಲಿಯೂ ಕಥನದ ವಿವರಗಳಲ್ಲಿ ಮಾತ್ರ ವ್ಯತ್ಯಾಸವಷ್ಟೇ ವಿನಃ ಅವುಗಳ ಮೇಲಿನ ಶ್ರದ್ಧೆ ಹಾಗೂ ಕ್ರಿಯಾ ವಿಧಾನಗಳ ಅಂತರವಿಲ್ಲ. 'ದೈವಾ ಹಿಂತಾ ಸೇವಾ ಮಾಡೋದನ್ನ ನಮ್ಮ ಮನಿತನಕ್ಕಕೊಟ್ಟೈತಿ'ಅನ್ನೋ ಮೂಲ ದ್ಯಾವಪ್ಪನಂತೇಯೇ, ಮಹತ್ಮಾಗಾಂಧಿ ಸಮಾಧಿಎದುರುಜನತಾಪಕ್ಷ ಮಂದಿಗೆ ರಾಜಕೀಯ ಶಪಥಾಮಾಡಸಾಕ ಹತ್ತಿದಜೆ.ಪಿ. ಯವರ ಮೇಲೆ ಆಖಂಡ ವಿಶ್ವಾಸ ಇರಿಸಿದ ಆಧುನಿಕದ್ಯಾವಪ್ಪಇದ್ದಾನೆ. ದೇಸಗತಿ ವ್ಯವಸ್ಥೇಯೊಳಗ ಕಾರಬಾರಿ, ತ್ರ್ಯಂಬಕಭಟ್ಟ, ಸೇನಾನಿ ಅವನ ಹೆಂಡತಿ ಪಾರವ್ವಇರೋ ಹಾಗೆ ಆಧುನಿಕ ಕಾಲಗತಿಯೊಳಗೆ ಟೆನೆನ್ಸಿಕಾನೂನನ್ನೇತನ್ನ ಪರವಾಗಿ ಬಲಸಿಕೊಂಡು ದ್ಯಾವಪ್ಪನ ನೆಲೆ ಮತ್ತುಆತನತಾಯಿಯ ಶೀಲ ಕಸಿಯೋ ಕಳ್ಳೀಗುದ್ದಿ ಗೌಡನಿದ್ದಾನೆ. ಕುಲಕರ್ಣಿ, ಜಮೀನಾರ, ಜಾತ್ಯಸ್ಥರಿದ್ದಾರೆ. ತೇರಿನ ನರಬಲಿಯಾಗುವಲ್ಲಿಕುಲದಉತ್ತಮಿಕೆಯಿಂದಕಾಪಾಡಲ್ಪಡುವಉತ್ತಮರಂತೆಯೇ ನವ ನಿರ್ಮಾಣ ಚಳವಳಿಯ ಒಳಗೂ ಕೈದಿಗಳ

ವರ್ಗೀಕರಣವಿದೆ. ದೇಸಗತಿಯೊಳಗೆ ವಿಠ್ಠಲ–ರುಕುಮಾಯಿಯರದೇಗುಲ, ತೇರು ಶಾಸ್ತ್ರ ಹೇಳುವವರು ಇರುವಂತೆಯೇ, ಇಲ್ಲಿಕಾಯಿದೆ ಪಾಸು ಮಾಡೋ ವಿಧಾನಸೌಧ ಮತ್ತು ಆ ಕಾಯ್ದೇಯ ಪಟ್ಟಿ ಹಿಡಿದು ನ್ಯಾಯದ ಅಳತೆ ಮಾಡೋ ನ್ಯಾಯಾಲಯಇದೆ. ಅಲ್ಲಿ ವಿಠ್ಠಲ ದೇವರಕಥೆಯಿದ್ದರೆ, ಇಲ್ಲಿ ನಮ್ಮದು ಪುಣ್ಯಭೂಮಿ... ನಮ್ಮ ಪೂರ್ವಜರೆಲ್ಲಾಅವತಾರೀ ಪುರುಷರು ಎಂಬ ದೇಶದಕಥನವಿದೆ. ಹೀಗೆ ಎಲ್ಲಾ ತೇರುಗಳನ್ನೂ ಎಳೆಯುವವರು ಅಧಿಕಾರಕೇಂದ್ರದಲ್ಲಿರುವವರು. ಹಾಗಾಗಿ ವಿಶ್ವಾಸವಿರಿಸುವ ಪರಿಕರಅಥವಾ ಸಂಕೇತಗಳು ಬೇರೆ ಬೇರೆಯಾಗಿದ್ದರೂ, ವಿಶ್ವಾಸಿಗರ ನೆಲೆ ಮತ್ತು ಸ್ವರೂಪಒಂದೇಆಗಿರುತ್ತದೆ.

ದೇಸಗತಿ ಕುಸಿದ ಮೇಲೂ ಉಳಿದುಕೊಂಡು ಬಂದತೇರುಆಚರಣೆಗೆ ಸುತ್ತಿಕೊಂಡು ಹಾಗೆ ಹೊಸಕಾಲಘಟ್ಟದರಾಜಕೀಯ ಬೆಳೆವಣಿಗೆಗಳನ್ನೂ ಜೋಡಿಸುವಕಾದಂಬರಿ, ಪ್ರಜಾಪ್ರಭುತ್ವದೊಳಗೇ ಮೊಳೆಯುತ್ತಿರುವ ಅನೇಕ ಅಪಕಲ್ಪನೆಗಳನ್ನು ದಾಖಲಿಸುತ್ತದೆ. ವಿಠ್ಠಲನ ದೇಗುಲ ಕಳವಾದಾಗ ಜೈನರ ಸ್ವಾಂವಜ್ಜನ ಹಿರಿತನಕ್ಕೆ ಬೆಲೆಕೊಟ್ಟು ಸಲಹೆ ಕೇಳುವ ಊರ ಹಿರೀಕರನ್ನುಯುವಕರು ಪ್ರತಿಭಟಿಸಿ, ಪ್ರಜಾಪ್ರಭುತ್ವಎಂದರೆಯಂಗ್ ಸ್ಟರಿಗೆ ಪವರುಕೊಡುವಂತಹದ್ದುಎಂದು ಪ್ರತಿಪಾದಿಸಿ, ಧರಣಿ ಮತ್ತು ಸತ್ಯಾಗ್ರಹಗಳ ಧುಮುಕಿ ಹಾಕುತ್ತಾರೆ. ಹಾಗೆಯೇ ಅನೇಕ ತೆರನಾದ ಒಳಹರಿವುಗಳನ್ನು ತೋರುವಕಾದಂಬರಿ ಸಮಕಾಲೀನ ಭಾರತದ ಬಹುದೊಡ್ಡ ಸಮಸ್ಯೆಯಾದಧಾರ್ಮಿಕ ಅಸಹಿಷ್ಣುತೆ, ಪೊಳ್ಳು ಮತ ಶ್ರದ್ಧೆಗಳ ಜೊತೆಗೆ ವಿಜೃಂಭಿಸುತ್ತಿರುವಕೋಮುವಾದ/ಮತೀಯವಾದ ಗುಂಗಿಗೆ ಒಳಗಾಗಿ ದಾರಿತಪ್ಪುತ್ತಿರುವಯುವ ಸಮುದಾಯವನ್ನು ನಮ್ಮ ಗಮನಕ್ಕೆ ತರುತ್ತದೆ.

ಕಾದಂಬರಿಜೈನರ ಸ್ವಾಂವಜ್ಜನನ್ನೂ ಒಳಗೊಂಡಂತೆ ವೈವಿಧ್ಯಮಯ ಶೈಲಿ ಹಾಗೂ ದಾಟಿಯ ನಿರೂಪಕರನ್ನು ಹೊಂದಿ ನಿರೂಪಣೆಯ ನೆಲೆಯಲ್ಲಿಯೇಒಂದು ಬಹುಧ್ವನಿತ್ವವನ್ನು ಪಡೆದುಕೊಳ್ಳುತ್ತದೆ. ಈ ಪ್ರಕ್ರಿಯೆಯೊಳಗೆ ಕಾಲಗತಿಯಲ್ಲಿ ಸಂಭವಿಸಿದ ತೇರು ಹಬ್ಬ–ರಕ್ತತಿಲಕ ಸೇವೆಗಳ ಸ್ಥಿತ್ಯಂತರದಂತೆಯೇ, ನವನಿರ್ಮಾಣದಂತಹ ಹೊಸ ರಾಜಕೀಯ ಸಂಕಥನದ ಸ್ಥಿತ್ಯಂತರವನ್ನೂ ಕಾದಂಬರಿತನ್ನತೆಕ್ಕೆಗೆತೆಗೆದುಕೊಂಡುಅಧಿಕಾರ ಶಕ್ತಿಗಳು ರೂಪಿಸುವ ಸಂಕಥನಗಳ ಸ್ವರೂಪ ಮತ್ತುಅವು ರೂಪಿಸಿರುವ ಶ್ರದ್ಧಾ ಕೇಂದ್ರಗಳು ನಡೆಸುವರಾಜಕಾರಣವನ್ನು ಬಯಲಿಗೆಳೆಯುತ್ತದೆ. ಹಾಗಾಗೀ ಬಹುಧ್ವನಿಯಲ್ಲಿ ಬಿಂಬಿತವಾಗಿರುವ ಕಾದಂಬರಿಯೊಳಗೆತೇರಿನ ಚಲನೆ ದೇಸಗತಿಯಿಂದತೊಡಗಿ ದೇಸಿಗರತ್ತ ಮುಖಮಾಡಿದೆಎನ್ನಬಹುದು.

ಕನ್ನಡದಒಂದು ಸೊಗಡನ್ನು ಪರಿಚಯಿಸುವ ಈ ಕಾದಂಬರಿ ವಿವಿಧ ಕಾಲಘಟ್ಟಗಳಲ್ಲಿ ನಡೆಯುವಕಥೆಯನ್ನು ವಿವಿಧ ಪ್ರದೇಶಗಳಲ್ಲಿ ನಡೆಯುವ ಘಟನೆಗಳನ್ನುಒಂದೆಡೆಯಲ್ಲಿ ಪೋಣಿಸಿಡುವಲ್ಲಿ ಪತ್ರಕರ್ತ ಪಾಟೀಲ, ಸ್ವಾಂವಜ್ಜ ಮತ್ತುಅವ್ಯಕ್ತ ನಿರೂಪಕನಾಗಿಕಾದಂಬರಿಕಾರ ಮೂರು ಹೆಣಿಗೆಗಳಾಗಿ ಒಂದೇಕಥಾನಕವನ್ನೂ ಹೆಣೆದುಕೊಟ್ಟು, ಓದುಗರಿಗೆ ಸುಂದರಕಲಾಕೃತಿ ಲಭ್ಯವಾಗಿದೆಎನ್ನಬಹುದು.

**ಪರಾಮರ್ಶನ ಗ್ರಂಥಗಳು**

1. ರಾಘವೇಂದ್ರ ಪಾಟೀಲ — ತೇರು
ಮನೋಹರಾ ಗ್ರಂಥ ಮಾಲೆ,
ಧಾರವಾಡ –001

2. ಜಿ ಎಸ್ ಆಮೂರ — ಕನ್ನಡ ಕಥನ ಸಾಹಿತ್ಯ : ಕಾದಂಬರಿ
ಸಪ್ನ ಬುಕ್ ಹೌಸ್, ಗಾಂಧಿನಗರ,
ಬೆಂಗಳೂರು–009(ಪ್ರಥಮ ಮುದ್ರಣ–1994)

3. ಸುರೇಶ ಹನಗಂಡಿ — ತೇರು ಕಾದಂಬರಿ – ವಿವೇಚನೆ

4. ಭಾರ್ಗವಿ ಜಿ ಎಸ್ (ಸಂಶೋಧಕರು) — ರಾಘವೇಂದ್ರ ಪಾಟೀಲರ ಸಮಗ್ರ ಸಾಹಿತ್ಯ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

5. http://suptadeepti.blogspot.com/2009/12/blog-post.html?m=1

6. http://raghavendrapatil.in/